ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೯ನೇ ಜೂನ್ ೧೯೯೦, ಆಷಾಢ ೧೫, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ)ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು

೧೦೭೪ ಶ್ರೀ ಎಸ್. ಷಫಿ ಅಹಮದ್ (ತುಮಕೂರು) -- ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಎ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು ?

(ಬಿ) ಇವುಗಳಿಗೆ ರಾಜ್ಯ ಸರ್ಕಾರವು ಹೂಡಿರುವ ಬಂಡವಾಳದ ಹಣವೆಷ್ಟು ?

(ಸಿ) ಈ ಉದ್ದಿಮೆಗಳ ಲಾಭ ಮತ್ತು ನಷ್ಟ (ಉದ್ದಿಮೆವಾರು ವಿವರಗಳನ್ನು ನೀಡುವುದು)?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ಪಕ್ಷ ಮಂತ್ರಿಗಳು)—

(ಎ) ದಿನಾಂಕ ೩೧-೩-೯೦ರಲ್ಲಿದ್ದಂತೆ ೬೧ ಸಾರ್ವಜನಿಕ ಉದ್ದಿಮೆಗಳು.
(ವಿ.ಐ.ಎಸ್.ಎಲ್.—ಈ ಸಾರ್ವಜನಿಕ ಉದ್ದಿಮೆಯನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಇವರಿಗೆ ಪಹಿಸಿಕೊಡಲಾಗಿದೆ).

(ಬಿ) ದಿನಾಂಕ ೩೧-೩-೯೯ರ ವರೆಗೆ ರಾಜ್ಯ ಸರ್ಕಾರವು ಇವುಗಳ ಮೇಲೆ ಹೂಡಿರುವ ಬಂಡವಾಳದ ಹಣ ರೂ. ೨೧೧೭.೮೯ ಕೋಟಿ.

(ಸಿ) ಉದ್ದಿಮೆಗಳ ಲಾಭ ಮತ್ತು ನಷ್ಟದ ಬಗ್ಗೆ ಪ್ರತ್ಯೇಕವಾದ ಪಟ್ಟಿಗಳನ್ನು ಈ ಕೂಡಲಗತ್ತಿಸಲಾಗಿದೆ.